**ಸಾಕ್ಷಿಯನ್ನು ದಿನಾಂಕಃ 29-01-2026 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.**

**ಮುಂದುವರೆದ ಪಾಟೀಸವಾಲುಃ 1 ನೇ ಪ್ರತಿವಾದಿ ಪರ ವಕೀಲರವರಿಂದಃ**

6. ಹಾಲಪ್ಪನು ರೇಣುಕಮ್ಮ ಮೃತ ಪಟ್ಟ ನಂತರ 1 ನೇ ಪ್ರತಿವಾದಿಯನ್ನು ವಿವಾಹವಾಗಿದ್ದನು ಅಂದರೆ ಸರಿ. ಹಾಲಪ್ಪನ ಮೊದಲನೇ ಹೆಂಡತಿ ರೇಣುಕಮ್ಮ ಜೀವಂತ ಇದ್ದಾಗ ಮತ್ತು ಆಕೆ ಸತ್ತ ನಂತರ ನನ್ನ ಅಣ್ಣನಾದ ಹಾಲಪ್ಪನು ಬೇರೆಯಾಗಿ ವಾಸ ಮಾಡುತ್ತಿದ್ದನು ಅಂದರೆ ಸರಿಯಲ್ಲ. ನಮ್ಮ ಕುಟುಂಬಕ್ಕೆ ನಮ್ಮ ಪೂರ್ವಜರಿಂದ ಯಾವುದೇ ಪಿರ್ತಾಜ್ರಿತ ಆಸ್ತಿ ಬಂದಿರುವುದಿಲ್ಲ ಅಂದರ ಸರಿಯಲ್ಲ. ಹಾಲಪ್ಪನು 1993 ರಿಂದಲೇ ಬೇರೆ ವಾಸ ಮಾಡುತ್ತಿದ್ದು ತನ್ನ ಸ್ವಂತ ದುಡುಮೆಯಿಂದ ದಾವಾ ಅಸ್ತಿಯನ್ನು ಖರೀದಿ ಮಾಡಿರುವನು ಅಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಗಂಡ ಹಾಲಪ್ಪ ಜೀವಂತ ಇದ್ದಾಗ ಆತ ಮತ್ತು 1 ನೇ ಪ್ರತಿವಾದಿ ಸೇರಿಕೊಂಡು ಮೆಣಸಿಕಾಯಿ ವ್ಯಾಪಾರ ಮಾಡುತ್ತಿದ್ದರು ಅಂದರೆ ಸುಳ್ಳು.

7. ದಾವಾ ಅಸ್ತಿ ಅವಿಭಕ್ತ ಕುಟುಂಬದ ಅಸ್ತಿ ಆಗಿರುವುದಿಲ್ಲ ಅಂದರ ಸರಿಯಲ್ಲ. ನಾನು ಹಾಗೂ ಇತರೆ ಪ್ರತಿವಾದಿಗಳು ದಾವಾ ಅಸ್ತಿಯನ್ನು ಖರೀದಿಸಲು ಹಾಲಪ್ಪನಿಗೆ ಯಾವುದೇ ಹಣವನ್ನು ನೀಡಿರುವುದಿಲ್ಲ ಅಂದರೆ ಸರಿಯಲ್ಲ. ಆಗ ನಾನು ಅಪ್ರಾಪ್ತ ವಯಸ್ಕನಿದ್ದೆ ಅಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ತೊಂದರೆ ಕೊಡಲು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ

ಅಂದರೆ ಸರಿಯಲ್ಲ. ಹಾಲಪ್ಪನ ಜೀವಿತ ಅವದಿಯಲ್ಲಿ ದಾವಾ ಸ್ವತ್ತು ಹಾಲಪ್ಪನ ಸ್ವಾಧೀನ ಅನುಭವದಲ್ಲಿ ಇದ್ದು ಈಗ 1ನೇ ಪ್ರತಿವಾದಿಯ ಸ್ವಾಧೀನ ಅನುಭವದಲ್ಲಿ ಇರುತ್ತದೆ ಅಂದರೆ ಸರಿಯಲ್ಲ. ಹಾಲಪ್ಪ ಜೀವಂತ ಇದ್ದಾಗ ದಾವಾ ಅಸ್ತಿಯಲ್ಲಿ ಮನೆಯನ್ನು ಕಟ್ಟಿದ್ದನು ಅಂದರೆ ನಾವು ಜಂಟಿ ವಾಸವಿದ್ದಾಗ ಸದರಿ ಮನೆಯನ್ನು ಕಟ್ಟಿದ್ದೆವು. ಆ ಮನೆಯನ್ನೂ ಕೂಡ ಹಾಲಪ್ಪ ತನ್ನ ಸ್ವಂತ ದುಡ್ಡನ್ನು ಖರ್ಚು ಮಾಡಿ ಕಟ್ಟಿರುತ್ತದೆ ಅಂದರೆ ಸರಿಯಲ್ಲ.

8. ದಿನಾಂಕ 09.02.1996 ರ ಕ್ರಯ ಪತ್ರ ಅಧಾರದ ಮೇಲೆ ಪುರಸಬೆಯುವರು ಹಾಲಪ್ಪನ ಹೆಸರಿಗೆ ಮುಟೇಶನ್ ಮಾಡಿರುವರು ಅಂದರೆ ಸರಿಯಲ್ಲ. ಪುರಸಬೆಯಿಂದ ಪರವಾನಿಗೆ ಪಾಡೆದು ಹಾಪಲಪ್ಪನು ದಾವಾ ಅಸ್ತಿಯಲ್ಲಿ 3 ಮನೆ ಕಟ್ಟಿರುವನು ಅಂದರೆ ಸರಿಯಲ್ಲ. ಆ 3 ಮನೆಗಳ ಪೈಕಿ 1ನೇ ಪ್ರತಿವಾದಿ ವಾಸ ಇದ್ದು ಉಳಿದ 2 ಮನೆಗಳನ್ನು ಬಾಡಿಗೆ ಕೊಟ್ಟರುವರು ಅಂದರೆ ಸರಿಯಲ್ಲ. ಹಾಲಪ್ಪ ಮೃತ ಪಟ್ಟ ನಂತರ ಸದರಿ ಮನೆಗಳು 1ನೇ ಪ್ರತಿವಾದಿಯ ಹೆಸರಿಗೆ ಮುಟೇಶನ್ ಆಗಿವೆ ಅಂದರೆ ಸರಿಯಲ್ಲ. ಹಾಲಪ್ಪನು 2008 ರಲ್ಲಿ ಮೃತ ಪಟ್ಟನು. ನನ್ನ ತಂದೆ 2012 ರಲ್ಲಿ ಮೃತ ಪಟ್ಟರು. ಆ ವಿಚಾರವನ್ನು ನಾನು ನನ್ನ ವಾದ ಪತ್ರದಲ್ಲಿ ಬರೆಸಿರುವುದಿಲ್ಲ. ನನ್ನ ತಂದೆ ಬಹಳ ಹಿಂದೆಯೇ ತೀರಿಕೊಂಡು 2012 ರಲ್ಲಿ ಮೃತ ಪಟ್ಟಿರುವರು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

9. ಹಾಲಪ್ಪನು ದಾವಾ ಅಸ್ತಿಯಲ್ಲಿ ಮನೆಯನ್ನು ಕಟ್ಟಿಸುವ ಸಲುವಾಗಿ ಅಡಮಾನ ಸಾಲವನ್ನು ದಾವಾ ಅಸ್ತಿಯ ಮೇಲೆ ತೆಗೆದುಕೊಂಡಿದ್ದನು ಅಂದರೆ ಸರಿಯಲ್ಲ. ಆತನು ಸಾಲ ತೀರಿಸದೇ ಮೃತ ಪಟ್ಟ ಕಾರಣ 1 ನೇ ಪ್ರತಿವಾದಿ ಸಾಲ ಪಾವತಿ ಮಾಡಿ ದಾವಾ ಅಸ್ತಿಯನ್ನು ಬಿಡಿಸಿಕೊಂಡಿರುವರು ಅಂದರೆ ಸರಿಯಲ್ಲ. ಆ ಕುರಿತು ಹರಪನಹಳ್ಳಿ ತಾಲ್ಲೂಕ ಸೌಹಾರ್ದ ಸಂಘ ಇವರು ಸಾಲ ತಿರುವಳಿ ಪತ್ರವನ್ನು 1 ನೇ ಪ್ರತಿವಾದಿ ಹೆಸರಿಗೆ ನೊಂದಣಿ ಮಾಡಿ ಕೊಟ್ಟಿರುವರು ಅಂದರೆ ಸರಿಯಲ್ಲ.

10. ನನ್ನ ಅಣ್ಣ ಅಡಮಾನ ಮಾಡಿ ಸಾಲ ಮಾಡಿದ ವಿಚಾರ ನನಗೆ 2000 ರಲ್ಲಿ ಗೊತ್ತಿತ್ತು ಅಂದರೆ ಸರಿ. ಆ ಸಮಯದಲ್ಲಿ ನಾನು ತಕರಾರು ಮಾಡಿದ್ದೇನೆ . ನಾನು ಆ ರೀತಿ ತಕರಾರು ಮಾಡಿದ್ದೇನೆ ಎಂದು ವಾದ ಪತ್ರದಲ್ಲಿ ಬರೆಸಿದ್ದೇನೆ ಅಂದರೆ ಸರಿಯಲ್ಲ. ಆ ರೀತಿ ತಕರಾರು ಮಾಡಿದ ಬಗ್ಗೆ ಲಿಖಿತ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. ಅದು ಹಾಲಪ್ಪನ ಸ್ವಂತ ಅಸ್ತಿಯೆಂದು ನನಗೆ ಗೊತ್ತಿದ್ದ ಕಾರಣ ನಾನು ತಕರಾರು ಮಾಡಿರುವುದಿಲ್ಲ ಅಂದರೆ ಸರಿಯಲ್ಲ. ಹಾಲಪ್ಪನು ತನ್ನ ಜೀವಿತ ಅವದಿಯಲ್ಲಿ ದಿನಾಂಕ 23.12.1991 ರಂದು ಡೋರ ನಂ 1408/ಎ ಹೆಚ ಅಸ್ತಿಯನ್ನು ನೊಂದಾಯಿತ ಖರೀದಿ ಪತ್ರದ ಮೂಖಾಂತರ ರೂ 4,000/- ಕೊಟ್ಟು ಓಡ್ಡರ ಹಾಲಪ್ಪ ಇವರಿಂದ ಖರೀದಿ ಮಾಡಿದ್ದರು ಅಂದರೆ ಸರಿಯಲ್ಲ. ಅದು ಹಾಲಪ್ಪನ ಸ್ವಯರ್ಜಿತ ಅಸ್ತಿ ಅಂದರೆ ಸರಿಯಲ್ಲ. 1991 ರಿಂದ 1998 ರ ವರೆಗೆ ಹಾಲಪ್ಪ

ಮತ್ತು 1 ನೇ ಪ್ರತಿವಾದಿ ಅದೇ ಮನೆಯಲ್ಲಿ ವಾಸ ಇದ್ದರು ಅಂದರೆ ಸರಿಯಲ್ಲ. ದಾವಾ ಅಸ್ತಿಯಲ್ಲಿ ಹೊಸ ಮನೆಯನ್ನು ಕಟ್ಟಿಸಿದ ನಂತರ ಅವರಿಬ್ಬರೂ ಹೊಸ ಮನೆಯಲ್ಲಿ ವಾಸ ಮಾಡಲು ಪ್ರಾಂರಭಸಿದರು ಅಂದರೆ ಸರಿಯಲ್ಲ. ಮೇಲೆ ಹೇಳಿದ ಮನೆಯಲ್ಲಿ ಹೊಸೂರಪ್ಪ ಎಂಬುವವರು ಈಗ ವಾಸ ಮಾಡುತ್ತಿರುವರು. ಅ ಮನೆಯಲ್ಲಿ ದುರುಗಪ್ಪ ವಾಸ ಇರುವರು ಮತ್ತು ಹೊಸೂರಪ್ಪ ವಾಸ ಇರುವುದಿಲ್ಲ ಅಂದರೆ ಸರಿಯಲ್ಲ. ಆ ರೀತಿ ಹಾಲಪ್ಪನು ಮೇಲೆ ಹೇಳಿದ ಮನೆಯನ್ನು ಖರೀದಿ ಮಾಡಿದ ವಿಚಾರ ಆತ ಖರೀದಿ ಮಾಡಿದಾಗಿನಿಂದ ನಮಗೆ ಗೊತ್ತಿರುತ್ತದೆ ಅಂದರೆ ಸರಿಯಲ್ಲ.

11. ನಾನು ಈ ದಾವೆಯಲ್ಲಿ ಹಾಲಮ್ಮನ ವಾರಸುದಾರರನ್ನು ಸೇರಿಸದ ಕಾರಣ ಈ ದಾವೆ ಊರ್ಜಿತವಾಗುವುದಿಲ್ಲ ಅಂದರೆ ಸರಿಯಲ್ಲ. ದಾವಾ ಅಸ್ತಿ ಈಗ ಸರ್ವೆ ನಂಬರಿನಲ್ಲಿ ಅಸ್ತಿತ್ವದಲ್ಲಿ ಇಲ್ಲ ಅಂದರೆ ಸರಿಯಲ್ಲ. ದಾವಾ ಅಸ್ತಿಯಲ್ಲಿ 3 ಡೋರ ನಂಬರುಗಳು ಚಾಲ್ತಿಯಲ್ಲಿವೆ ಅಂದರೆ ಸರಿಯಲ್ಲ. ನನ್ನ ಅಣ್ಣನ ಹೆಸರಿನಲ್ಲಿ ಅವಿಭಕ್ತ ಕುಟುಂಬವು ದಾವಾ ಅಸ್ತಿಯನ್ನು ಖರೀದಿ ಮಾಡಿರುವರು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನನಗೆ ಗೊತ್ತಿಲ್ಲದೇ ದಾವಾ ಅಸ್ತಿಯನ್ನು ಹಾಲಪ್ಪನು ಮುಟೇಶನ್ ಮಾಡಿಸಿಕೊಂಡನು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

12. ಹಾಲಪ್ಪನ ಹೆಸರಿಗೆ ಆದ ಮುಟೇಶನ್ ಆದೇಶವನ್ನು ನಾನು ಕಂದಾಯ ಇಲಾಖೆಯಲ್ಲಿ ಪ್ರಶ್ನೆ ಮಾಡಿರುವುದಿಲ್ಲ ಅಂದರೆ ನನಗೆ ಗೊತ್ತಿರಲಿಲ್ಲ.

ನಾನು 2014 ರಲ್ಲಿ ಪ್ರತಿವಾದಿಯನ್ನು ಭಾಗ ಕೊಡುವಂತೆ ಕೇಳಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನನಗೆ ದಾವಾ ಅಸ್ತಿಯಲ್ಲಿ ಯಾವುದೇ ಹಕ್ಕು ಅಧಿಕಾರ ಇರುವುದಿಲ್ಲ ಅಂದರೆ ಸರಿಯಲ್ಲ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸರಿಯಿದೆ.**

29-01-2026
**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ಹರಪನಹಳ್ಳಿ**

**ಸಾಕ್ಷಿಯ ಸಹಿ** 29.01.2026